ಗಂಡಂದಿರ ಕುಟುಂಬಕ್ಕೇ ಸೇರುತ್ತಾರೆ. ನನ್ನ ಜೊತೆ ಇರುವ ಮಕ್ಕಳು ಬಿಟ್ಟರೆ ನನ್ನ ಯಜಮಾನಿಕೆಯ ಬೇರೆ ಕುಟುಂಬವಿಲ್ಲ." ಹಚಿನ್ಸನ್ ಹೇಳಿದ.

"ಸರಿ ಹಾಗಾದರೆ. ನಿಮ್ಮ ಮಕ್ಕಳೆಷ್ಟು ಮಿಸ್ಟರ್ ಹಚಿನ್ಸನ್?"

"ಮೂರು. ಬಿಲ್ಲ್ ಜೂನಿಯರ್, ನ್ಯಾನ್ಸಿ, ಮತ್ತು ಡೇವ್. ಟೆಸ್ಸಿ ಮತ್ತು ನಾನು."

ಬಿಲ್ಲನ ಕಪ್ಪು ಚುಕ್ಕಿ ಇಟ್ಟ ಚೀಟಿಯನ್ನು ಸೇರಿಸಿ ಐದು ಚೀಟಿಗಳನ್ನು ಗ್ರೇವ್ಸ್ ತೆಗೆದಿಟ್ಟು ಉಳಿದ ಎಲ್ಲಾ ಚೀಟಿಗಳನ್ನು ಪಡೆದು ಮತ್ತೆ ಪೆಟ್ಟಿಗೆಗೆ ಹಾಕಲಾಯಿತು.

"ಸರಿ. ಮಿಸ್ಟರ್ ಗ್ರೇವ್ಸ್, ಈ ಐದು ಜನರ ಚೀಟಿಗಳು ತಯಾರಾಗಿವೆಯೇ?" ಸಮ್ಮರ್ಸ್ ಪೋಸ್ಟ್‌ಮಾಸ್ಟರನ್ನು ಕೇಳಿದ. ಹೌದೆಂದು ಅವರು ಚೀಟಿಗಳನ್ನು ಎತ್ತಿ ತೋರಿಸಿದರು.

"ಏನೇ ಹೇಳಿ ಇದು ಅನ್ಯಾಯ. ನೀವು ನನ್ನ ಗಂಡನಿಗೆ ಸಮಯಾವಕಾಶವನ್ನು ಕೊಡಲೇ ಇಲ್ಲ. ಅವಸರಿಸಿದಿರಿ. ಯಾರನ್ನು ಬೇಕಾದರೂ ಕೇಳಿ. ಮತ್ತೊಮ್ಮೆ ಲಾಟರಿ ಎತ್ತುವುದೇ ಸರಿಯಾದ ಕ್ರಮ." ಟೆಸ್ಸಿ ಮತ್ತೆ ಪ್ರತಿಭಟಿಸಿದಳು. ಪೋಸ್ಟ್ ಮಾಸ್ಟರ್ ಗ್ರೇವ್ಸ್, ಕಪ್ಪು ಪೆಟ್ಟಿಗೆಯಲ್ಲಿದ್ದ ಉಳಿದೆಲ್ಲರ ಚೀಟಿಗಳನ್ನೂ ಹೊರಚೆಲ್ಲಿದರು. ಅವು ಒಮ್ಮೆಲೇ ಎದ್ದ ಚಿಟ್ಟೆಗಳಂತೆ ಗಾಳಿಗೆ ಎಲ್ಲೆಂದರಲ್ಲಿ ತೇಲಿ ಹೋದವು. ಕಪ್ಪು ಪೆಟ್ಟಿಗೆಯೊಳಗೆ ಹಚಿನ್ಸನ್ ಕುಟುಂಬದ ಸದಸ್ಯರಿಗೆಂದೇ ಪ್ರತ್ಯೇಕವಾಗಿ ಐದು ಮಡಚಿದ ಚೀಟಿಗಳನ್ನು ಹಾಕಲಾಯಿತು.



"ಇದು ಅನ್ಯಾಯ..." ನೆರೆದಿದ್ದವರ ಮೇಲೆ ಕಣ್ಣು ಹಾಯಿಸುತ್ತಾ ಹೇಳಿದಳು ಟೆಸ್ಸಿ. ಅವಳಿಗೆ ಯಾರೂ ಪ್ರತಿಕ್ರಿಯಿಸಲಿಲ್ಲ. ಮುಖ ತಿರುಗಿಸಿದರು.

"ಶುರು ಮಾಡೋಣವೇ ಬಿಲ್ಲ್?" ಹಚಿನ್ಸನ್ನನ ಕುಟುಂಬದ ಎಲ್ಲರ ಮೇಲೂ ಕಣ್ಣು ಹಾಯಿಸಿ ಸಮ್ಮರ್ಸ್ ಕೇಳಿದ. ಎಲ್ಲರೂ ಸಮ್ಮತಿ ಸೂಚಿಸಿದರು.

"ನೀವು ಐದು ಜನರೂ ಚೀಟಿ ಎತ್ತಿಕೊಳ್ಳುವವರೆಗೆ ಬಿಚ್ಚಿ ನೋಡಬೇಡಿ" ಎಂದ ಸಮ್ಮರ್ಸ್. ಮೊದಲು ಡೇವಿಯನ್ನು ಕರೆಯಲಾಯಿತು. ನಗುನಗುತ್ತಲೇ ಬಿಲ್ಲನ ಕೊನೆಯ ಮಗ ಡೇವ್ ಮುಂದೆ ಬಂದ. "ಮಿಸ್ಟರ್ ಗ್ರೇವ್ಸ್, ನೀವು ಪುಟ್ಟ ಡೇವನಿಗೆ ಚೀಟಿ ಎತ್ತಲು ಸಹಾಯ ಮಾಡಿ."

ಮಿಸ್ಟರ್ ಗ್ರೇವ್ಸ್ ಅವನ ಪುಟ್ಟ ಕೈಯನ್ನಿಡಿದು ಪೆಟ್ಟಿಗೆಯಿಂದ ಚೀಟಿಯನ್ನು ಎತ್ತಲು ಸಹಾಯ ಮಾಡಿದರು. ಅವನು ಚೀಟಿಯನ್ನು ತನ್ನ ಪುಟ್ಟ ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದು ಗ್ರೇವ್ಸನ ಪಕ್ಕದಲ್ಲೇ ಅವರ ಮುಖವನ್ನು ನೋಡುತ್ತಾ ನಿಂತುಕೊಂಡ.

ನಂತರ ಚೀಟಿಯನ್ನು ಎತ್ತಲು ಹನ್ನೆರಡು ವರ್ಷದ ನ್ಯಾನ್ಸಿ ಮುಂದೆ ಬಂದಳು. ಅವಳ ತರಗತಿಯ ಸಹಪಾಠಿಗಳು ಉಸಿರು ಬಿಗಿ ಹಿಡಿದು ಅವಳನ್ನೇ ನೋಡುತ್ತಿದ್ದರು. ಅವಳು ಚೀಟಿ ಎತ್ತುತ್ತಿದ್ದಂತೆ ಬಿಲ್ಲ್ ಜೂನಿಯರ್ ಬಂದ. ಈಗ ಟೆಸ್ಸಿಯ ಸರದಿ. ಅವಳ ಮುಖ ಇನ್ನೂ ದುಮುಗುಟ್ಟುತ್ತಿತ್ತು. ಅವಳು ಪೆಟ್ಟಿಗೆಯೊಳಗಿಂದ ಚೀಟಿಯನ್ನು ಎತ್ತಿಕೊಂಡು ಯಾರನ್ನೂ ನೋಡದೆ ಉಳಿದವರ ಜತೆ ನಿಂತುಕೊಂಡಳು. ಕೊನೆಗೆ ಬಂದವನು ಬಿಲ್ಲ್. ಅವನು ಪೆಟ್ಟಿಗೆಯೊಳಗೆ ಕೈ ಹಾಕಿದ ರಭಸಕ್ಕೆ ಅದು ಕೆಳಗೆ ಬೀಳುವುದರಲ್ಲಿತ್ತು!

"ಸರಿ. ಮಿಸ್ಟರ್ ಗ್ರೇವ್ಸ್, ನೀವು ಡೇವನ ಚೀಟಿ ಪಡೆದು ನೋಡಿ." ಎಂದ ಸಮ್ಮರ್ಸ್.

ಅವನು ಚೀಟಿಯನ್ನು ಬಿಚ್ಚಿ ಎಲ್ಲರಿಗೂ ಎತ್ತಿ ತೋರಿಸಿದ. ಎಲ್ಲರೂ ಬಿಗಿ ಹಿಡಿದಿದ್ದ ಉಸಿರನ್ನು ನಿರಾಳವಾಗಿ ಹೊರಬಿಟ್ಟರು. ಅದು ಖಾಲಿಯಾಗಿತ್ತು!

ಜೂನಿಯರ್ ಬಿಲ್ಲ್ ಮತ್ತು ನ್ಯಾನ್ಸಿ ಒಟ್ಟಿಗೇ ತಮ್ಮ ಚೀಟಿಗಳನ್ನು ತೆರೆದು ನೋಡುತ್ತಿದ್ದಂತೆ ಅವರ ಮುಖ ಅರಳಿತು. ಅವರು ಖುಷಿಯಿಂದ ಖಾಲಿ ಚೀಟಿಗಳನ್ನು ಜನರಿಗೆ ಎತ್ತಿ ತೋರಿಸಿ ಕುಪ್ಪಳಿಸಿದರು. ಅಷ್ಟರಲ್ಲಿ ಬಿಲ್ಲ್ ತನ್ನ ಚೀಟಿಯನ್ನು ತೆರೆದಿದ್ದ. ಅವನು ಎತ್ತಿ ತೋರಿಸಿದ. ಅದೂ ಖಾಲಿಯಾಗಿತ್ತು!